**◆ 'ಹರಿಕಥಾ ವಿದ್ವಾನ್ ಲಕ್ಷ್ಮಣದಾಸ' ಎಂದು ಕರೆದಾಗ ನಿಮಗೆ ಏನನ್ನಿಸುತ್ತೆ?**

ತುಂಬಾ ಖುಷಿ ಆಗುತ್ತೆ. ಯಾಕೆಂದರೆ, ಕೆಲವರಿಗೆ (ವಿಶೇಷವಾಗಿ ಮೇಲ್ಜಾತಿಗಳಿಗೆ) ಮಾತ್ರ ಸೀಮಿತವಾಗಿದ್ದ ಹರಿಕಥಾ ಕೀರ್ತನೆಯನ್ನು ತಳಸಮುದಾಯದ ನಾನು ಕಲಿತು ಈ ಮಟ್ಟಕ್ಕೆ ಬೆಳೆದಿದ್ದೇನೆ. ಅಲ್ಲದೆ ಅದರಲ್ಲಿ ಅನೇಕ ಪ್ರಯೋಗಗಳನ್ನು ಕೂಡ ಮಾಡಿರುವೆ. ಎಲ್ಲಿಯ ನಾನು? ಎಲ್ಲಿಯ ಕೀರ್ತನ ಪರಂಪರೆ? ಎರಡೂ ಸೇರಿದೆಯೆಲ್ಲ, ಅದಕ್ಕೆ ಸಾರ್ಥಕಭಾವ ಮೂಡಿಸುವಂತಹದ್ದು. ಸಾಹಿತ್ಯ ಕೃತಿಗಳನ್ನು ಕಥೆಗೆ ಅಳವಡಿಸಿದ್ದಕ್ಕೋ, ಜನಕಥಾಕೀರ್ತನೆ ಆಗಿಸಿದ್ದಕ್ಕೋ ಏನೋ ಕೇಂದ್ರ ಮತ್ತು ರಾಜ್ಯ ಸಂಗೀತ ಅಕಾಡೆಮಿ ಪ್ರಶಸ್ತಿಗಳು, ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಬಂದಿವೆ. ಇವೆಲ್ಲದರ ಹಿಂದೆ 'ಹರಿಕಥಾ ವಿದ್ವಾನ್' ಎನ್ನುವ ವಿಶೇಷಣ ಇದೆ.

**◆ ನಿಮ್ಮ ಬಾಲ್ಯ ಹೇಗಿತ್ತು? ಕುಟುಂಬದ ಹಿನ್ನೆಲೆ ಏನು?**

ಬಾಲ್ಯದಲ್ಲಿ ತುಂಬಾ ಸಾವು-ನೋವುಗಳನ್ನು ಕಂಡೆ. ನಮ್ಮಪ್ಪ, ನಮ್ಮವ್ವ, ದೊಡ್ಡಪ್ಪ, ಚಿಕ್ಕಪ್ಪ ತುಂಬಿದ ಕುಟುಂಬದಲ್ಲಿ ನಾನು ಕಷ್ಟ ಅನುಭವಿಸಿದರೂ ಬಡತನ ಅನುಭವಿಸಲಿಲ್ಲ. ತುಮಕೂರು ಜಿಲ್ಲೆಯ ಮಲ್ಲಸಂದ್ರದಲ್ಲಿ ಕೂಡುಕುಟುಂಬ ನಮ್ದು. ಎಲ್ರೂ ನಮ್ಮನೆಗೆ ಬಂದು ಸಹಾಯ ಪಡೆದುಕೊಂಡು ಹೋಗ್ತಾ ಇದ್ರು. ನಮ್ಮೂರಲ್ಲಿ ನಾಯಕರು, ತಿಗಳರು, ಹೊಲೇರು ಎಂಟು ಮನೆ, ಮಾದಿಗ್ರು ಇಪ್ಪತ್ತು ಮನೆ ಇದ್ವು. ಈಗಂತೂ ಎಲ್ಲರೂ ಸಮೃದ್ಧವಾಗಿದ್ದಾರೆ. ನಾನು ಹೈಸ್ಕೂಲಿಗೆ ಓದಲಿಕ್ಕಾಗಿ ತುಮಕೂರಿನ ಬಾಳೇಗೌಡನ ಪಾಳ್ಯದಲ್ಲಿ ಎಕೆ-ಎಡಿ ಹಾಸ್ಟೆಲ್ ಅಂತ ಇತ್ತು. ಅಲ್ಲಿಗೆ ಸೇರಿಸಿದರು. ಎನ್. ರಾಚಯ್ಯನವರು ಆ ಹಾಸ್ಟೆಲ್‌ನ ಅಧ್ಯಕ್ಷರು. ಅವರು ಮತ್ತು ಕೆ. ಭೀಮಯ್ಯ ಸೇರಿ ಹಾಸ್ಟೆಲ್ ತೆರೆದಿದ್ರು, ನಮ್ಮ ಹುಡುಗರು ಓದಲಿ ಅಂತ. ಅಲ್ಲಿಗೆ ಸೇರಿಕೊಂಡ ಮೇಲೆ ಚಟಾಕು ಅಕ್ಕಿ ಅನ್ನ, ಪಾವ್‌ರಾಗಿ ಹಸಿಟ್ಟು ಇಟ್ಟು (ಮುದ್ದೆ) ಇಷ್ಟೇ ಊಟ. ಊರಿನಲ್ಲಿ ಚೆನ್ನಾಗಿ ಇದ್ದವನನ್ನು ನಮ್ಮಪ್ಪ ಇಲ್ಲಿ ಹಾಕಿಬಿಟ್ಟನಲ್ಲ ಅಂತ ಸಿಟ್ಟು ಬಂದು ಸರಿಯಾಗಿ ಓದಲಿಲ್ಲ. ನಮ್ಮಪ್ಪ ಮದುವೆಗಳಲ್ಲಿ ಡೋಲು ನುಡ್ಸೋನು. ನಮ್ ತಾಯಿ ನಾನು ಚಿಕ್ಕ ವಯಸ್ಸಿನಲ್ಲಿದ್ದಾಗಲೇ ಹೋಗಿಬಿಟ್ರು. ಅವರನ್ನ ಸರಿಯಾಗಿ ನಾನು ನೋಡ್ಲೇಇಲ್ಲ. ನಮ್ಮ ದೊಡ್ಡಮ್ಮ ನನ್ನ ಸಾಕಿದ್ಲು. ಸಾಕಮ್ಮ ಅಂತ್ಲೇ ಅವ್ರ ಹೆಸ್ರು. ನಮ್ದು ತುಂಬಿದ ಕುಟುಂಬ. ಆ ಕುಟುಂಬದಿಂದಲೇ ಬಂದೋನು ನಾನು.



1963ರಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಫೇಲ್ ಆಗ್ಬಿಟ್ಟೆ. ಓ ಇದ್ಯಾಕೋ ಸರೋಗ್ಲಿಲ್ಲ ಅಂತ ಇಂಗೇ ಕಾಲ ಕಳೀತಿದ್ದೆ. ಆಗ ಮಾರ್ಚಿಯಲ್ಲಿ ಬಿಟ್ಟರೆ ಸೆಪ್ಟೆಂಬರ್-ಅಕ್ಟೋಬರ್‌ನಲ್ಲಿ ಪರೀಕ್ಷೆ ನಡೆಯೋದು. ಪರೀಕ್ಷೆ ಕಟ್ತಿದ್ದೆ. ಫೇಲ್ ಆಗೋದು ಇಂಗೇ ಆಗದು. ಎರಡ್ಮೂರು ಸತಿ ಫೇಲಾದೆ.

**◆ ನಾಟಕದ ಆಸಕ್ತಿ ಮೂಡಿದ್ದು ಯಾವಾಗ?**

ಯಾವಾಗ ಎಸ್ಸೆಸ್ಸೆಲ್ಸಿ ಫೇಲ್ ಆಗ್ತಾ ಇದ್ನೋ, ಆಗ ನಾಟಕ ನೋಡೋ ಹುಚ್ಚು ಹತ್ಕಂತು. ಆಗ ತುಮಕೂರಲ್ಲಿ ನಾಟಕಗಳ ಸುಗ್ಗಿ. ಅನೇಕ ಕಲಾವಿದರುಗಳು ತಮ್ಮ ನಾಟಕ ಕಂಪನಿಗಳನ್ನು ಬಿಟ್ಟು ಹೊರಗಡೆ ಬಂದು ಅವರೇ ನಾಟಕಗಳನ್ನು ಆಡುತ್ತಿದ್ರು. ತಿಂಗಳಲ್ಲಿ ಹತ್ತತ್ತು ನಾಟಕ ಇಂಗೆಲ್ಲಾ ಮಾಡ್ತಿದ್ರು. ಅಂತ ನಾಟಕಗಳಲ್ಲಿ ಬಂದ ದುಡ್ಡಿನಲ್ಲೇ 'ರಣಧೀರ ಕಂಠೀರವ' ಸಿನಿಮಾ ಆಗಿದ್ದು. ಓಬಳೇಶ್ ಅಂತ ಹೇಳಿ ದೊಡ್ಡ ವೃತ್ತಿಕಂಪನಿಯ ಕಲಾವಿದರು, ಅವರ ಸಹಾಯಾರ್ಥವಾಗಿ ಅಣ್ಣಾವ್ರು (ರಾಜ್‌ಕುಮಾರ್) ನಮ್ಮ ತುಮಕೂರಿಗೆ ಬಂದು ಮೂರು